**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.120/2019**

**(ಚಾ.ಸಾ.1/ಪ್ರಾ.ಸಾ.1)**

ತಾಃ26-07-2022 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಸಂತೋಷ್ |
| ತಂದೆಯ ಹೆಸರು | ಶ್ರೀನಿವಾಸ್ |
| ವಯಸ್ಸು | 23 ವರ್ಷ |
| ಉದ್ಯೋಗ | ಡ್ರೈವರ್ |
| ವಾಸ ಸ್ಥಳ | ದಳಸಗೆರೆ |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

1. ನನಗೆ ಎಲ್ಲಾ ಆರೋಪಿತರ ಪರಿಚಯ ಇರುತ್ತದೆ. ಚಾಸಾ.2 ನನ್ನ ಚಿಕ್ಕಮ್ಮ ಆಗಿದ್ದು, ಚಾಸಾ.3 ನನ್ನ ಚಿಕ್ಕಪ್ಪ ಆಗಿದ್ದು, ಚಾಸಾ.4 ನನ್ನ ತಾತ ಆಗಿರುತ್ತಾರೆ. ಚಾಸಾ.4 ಕೃಷ್ಣಪ್ಪ ಇವರು 1 ವರ್ಷದ ಹಿಂದೆ ಮೃತಪಟ್ಟಿರುತ್ತಾರೆ. ಆರೋಪಿತರು ದಳಸಗೆರೆ ಗ್ರಾಮದಲ್ಲಿರುವ ಚಾಸಾ.4 ಕೃಷ್ಣಪ್ಪ ಇವರ ಹೆಸರಿನಲ್ಲಿದ್ದ ಸರ್ವೆ ನಂ.171 ರ ಬಗ್ಗೆ ಗಲಾಟೆ ಮಾಡಿರುತ್ತಾರೆ. ಈ ಕೇಸಿನ ಎಲ್ಲಾ ಆರೋಪಿತರು ನಮ್ಮ ಸಂಬಂಧಿಕರಾಗಿರುತ್ತಾರೆ. ದಿನಾಂಕ 13-10-2018 ರಂದು ಬೆಳಗ್ಗೆ 11ಃ00 ಗಂಟೆ ಸಮಯದಲ್ಲಿ ಎಲ್ಲಾ ಆರೋಪಿತರು ನಮ್ಮ ಜಮೀನಿಗೆ ಚಪ್ಪಡಿ ಕಲ್ಲನ್ನು ಹಾಕುತ್ತಿದ್ದು ಚಾಸಾ.4 ಕೃಷ್ಣಪ್ಪ ಇವರು ಅದನ್ನು ಪ್ರಶ್ನಿಸಿ ಆರೋಪಿತರ ಕೆಲಸವನ್ನು

ನಿಲ್ಲಿಸಿರುತ್ತಾರೆ. ಆರೋಪಿತರಿಗೆ ಸದರಿ ಜಮೀನು ತನ್ನ ಜಮೀನು ಎಂದು ಚಾಸಾ.4 ರವರು ಹೇಳಿ ನಂತರ ಹೆಚ್ ಕ್ರಾಸ್ ಗೆ ಹೋಗಿರುತ್ತಾರೆ. ಅದೇ ದಿನ ಸಂಜೆ 04:00 ಗಂಟೆಗೆ ಎಲ್ಲಾ ಆರೋಪಿತರು ನಮ್ಮ ಜಮೀನಿನ ಬಳಿ ಬಂದು ಚಪ್ಪಡಿ ಕಲ್ಲನ್ನು ಹೂಳಲು ಬಂದಿದ್ದು ಅವರೆಲ್ಲರೂ ಕಬ್ಬಿಣದ ರಾಡ್ ಹಾಗೂ ದೊಣ್ಣೆ ಹಿಡಿದುಕೊಂಡು ಬಂದಿದ್ದರು. ಅದಕ್ಕಾಗಿ ನಾನು, ಚಾಸಾ.2 ಮತ್ತು 3 ರವರು ಆರೋಪಿತರನ್ನು ತಡೆಯಲು ಹೋಗಿದ್ದೆವು.

2. ಆಗ ಎಲ್ಲಾ ಆರೋಪಿತರು ನಮ್ಮನ್ನು ಕುರಿತು ತಡೆಯಲು ಬಂದಲ್ಲಿ ಒಬ್ಬರನ್ನೂ ಬಿಡುವುದಿಲ್ಲ ಸಾಯಿಸುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ. ನಂತರ 1ನೇ ಆರೋಪಿ ಕಬ್ಬಿಣದ ರಾಡ್ ನಿಂದ ನನ್ನ ತಲೆಯ ಮುಂಭಾಗಕ್ಕೆ ಹೊಡೆದಿರುತ್ತಾರೆ. ನಂತರ 3ನೇ ಆರೋಪಿ ಚಾಸಾ.2 ರವರ ಬಟ್ಟೆ ಹಿಡಿದು ಎಳೆದಾಡಿ ಅವರ ಬಲ ಕೈ ತಿರುಚಿ ಹಲ್ಲೆ ಮಾಡಿರುತ್ತಾರೆ. 2ನೇ ಆರೋಪಿ ಚಾಸಾ.3 ರವರ ಬೆನ್ನಿಗೆ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ. ಉಳಿದ ಆರೋಪಿತರು ನನಗೆ, ಚಾಸಾ.2 ಮತ್ತು 3 ರವರಿಗೆ ಕೈ ಕಾಲುಗಳಿಂದ ಹೊಡೆದಿರುತ್ತಾರೆ. ಗಲಾಟೆಯನ್ನು ನನ್ನ ತಂದೆಯಾದ ಚಾಸಾ.5 ಶ್ರೀನಿವಾಸ್ ಇವರು ಬಿಡಿಸಿರುತ್ತಾರೆ. ನನ್ನನ್ನು ನನ್ನ ತಂದೆ ನಂದಗುಡಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತಾರೆ. ಚಾಸಾ.2 ಮತ್ತು 3 ರವರು ಸಹ ನಂದಗುಡಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಅದೇ ದಿನ ರಾತ್ರಿ 08:30ಕ್ಕೆ ನಾನು ಆರೋಪಿತರ ವಿರುದ್ಧ ದೂರು ದೂಖಲಿಸಿದ್ದು, ಸಾಕ್ಷಿದಾರರು ತಾನು ನೀಡಿದ ದೂರು ಹಾಗೂ ಅವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.1 ಮತ್ತು ನಿಪಿ.1(ಎ) ಎಂದು ಗುರುತಿಸಲಾಯಿತು. ಆರೋಪಿತರು ಘಟನೆ ಸಮಯದಲ್ಲಿ ನಮಗೆ ಸೂಳೆ ಮಕ್ಕಳು ಹಾಗೆ ಹೀಗೆ ಎಂದು

ಬೈದಿರುತ್ತಾರೆ.

3. ಸಾಕ್ಷಿದಾರರು ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ಹಾಗೂ ಸಾಕ್ಷಿದಾರರ ಸಹಿಯನ್ನು ನಿಪಿ.2 ಮತ್ತು ನಿಪಿ.2(ಎ) ಎಂದು ಗುರುತಿಸಲಾಯಿತು. ಪೋಲೀಸರು ಮಹಜರ್ ಅನ್ನು ಮಾರನೆ ದಿನ ಬೆಳಗ್ಗೆ 10:00 ಗಂಟೆಯಿಂದ 11:00 ಗಂಟೆಯವರೆಗೆ ಜರುಗಿಸಿದ್ದು, ಕೃತ್ಯ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಮಹಜರ್ ಸಮಯದಲ್ಲಿ ನನ್ನ ಜೊತೆ ಚಾಸಾ.6 ಹಾಗೂ 7 ರವರು ಹಾಜರಿದ್ದರು. ನಿಪಿ.2 ರಲ್ಲಿ ಬರೆದ ವಿಚಾರ ನನಗೆ ತಿಳಿದಿರುತ್ತದೆ.

4. ಮಹಜರ್ ಮಾಡುವ ಸಮಯದಲ್ಲಿ ಆರೋಪಿತರು ನಮಗೆ ಹೊಡೆಯಲು ಉಪಯೋಗಿಸಿದ ದೊಣ್ಣೆ ಹಾಗೂ ರಾಡ್ ಅನ್ನು ನಾನೇ ಪೋಲೀಸರ ಮುಂದೆ ಹಾಜರು ಪಡಿಸಿರುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ ಒಂದು ದೊಣ್ಣೆ ಹಾಗೂ ರಾಡ್ ಅನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ.1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿದಾರರು ಗಲಾಟೆ ಸಮಯದಲ್ಲಿ ತನಗೆ ಹಾಗೂ ಚಾಸಾ.2 ರವರಿಗೆ ಆದಂತಹ ಗಾಯಗಳ ಬಗ್ಗೆ ತೆಗೆದ 4 ಫೋಟೋಗಳನ್ನು ನೋಡಿ ಗುರುತಿಸಿದ್ದು, ಸದರಿ ಫೋಟೋಗಳನ್ನು ನಿಪಿ.3 ರಿಂದ 6 ಎಂದು ಗುರುತಿಸಲಾಯಿತು. ನಿಪಿ.2 ಮಹಜರ್ ಗೆ ನಾನು ಕೃತ್ಯ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. 3 ಮತ್ತು 4 ನೇ ಆರೋಪಿತರು ಈಗ ಜೀವಂತ ಇರುವುದಿಲ್ಲ.

**ಪಾಟೀ ಸವಾಲುಃ ಶ್ರೀ.ಎಮ್.ಎಸ್.ಆರೋಪಿಪರ ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಮಾಧ್ಯಾಹ್ನ ಕೂಗಿಸಲು ಕೋರಿದ್ದು, ಕೇಸನ್ನು ಮಧ್ಯಾಹ್ನ ಕೂಗಿಸುವುದು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಎಸ್.ಸಿ.ನಂ.120/2019
ಚಾ.ಸಾ.1/ಪ್ರಾ.ಸಾ.1

**ಪುನಃ ಪ್ರಕರಣವನ್ನು ಮಧ್ಯಾಹ್ನ 04:00 ಗಂಟೆಗೆ ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲು: ಶ್ರೀ.ಎಮ್.ಎಸ್.ಆರೋಪಿಪರ ವಕೀಲರಿಂದ:**

ಶ್ರೀ.ಎಮ್.ಎಸ್.ವಕೀಲರು 3 ಮತ್ತು 4 ನೇ ಆರೋಪಿತರು ಮೃತ ಪಟ್ಟಿರುವ ಕಾರಣ ಪ್ರಕರಣದ ಬಗ್ಗೆ ಮಾಹಿತಿ ಪಡೆದಿಲ್ಲ ಈ ಕಾರಣಕ್ಕಾಗಿ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.